


ಆ್ಯಂಟನಿ
ಮತ್ತು
ಕ್ಲಿಯೋಪಾತ್ರ
Antony and Cleopatra
ಸಪ್ನ


ಆ್ಯಂಟನಿ
ಮತ್ತು
ಕ್ಲಿಯೋಪಾತ್ರ
Antony and Cleopatra
ಸಪ್ನ

A Shakespeare Children's Story
**Antony and Cleopatra**
Translated to Kannada by : L.S. Seshagiri Rao
(KB - 2384)

Published by :
**Sapna Book House (P) Ltd.,**
R.O. #11, 3rd Main Road,
Gandhinagar, Bengaluru- 560 009
Ph. 080-40114455

ISBN : 978-93-86631-84-8

**First Edition : 2017**

Pages : 64
Book Size : 1-8th Demi
Paper Used : 18.6 kg (70 gsm) N.S. Maplitho

Copyright © Macaw Books, 2012

*Licensor :*
**Sweet Cherry Publishing Limited, 2015**
Unit E, Vulcan Business Complex,
Vulcan Road,
Leicester, LE5 3EB,
United Kingdom

*Licensee :*
**Sapna Book House (P) Ltd., India 2015**

All rights reserved. No part of this publication may be reproduced or utilized in any form or by any means, electronic or mechanical, including photocopying, recording, or using any information storage and retrieval system, without prior permission in writing from the publisher.



## ಷೇಕ್ಸ್‌ಪಿಯರ್

ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಶ್ರೇಷ್ಠ ಬರಹಗಾರ ಎನಿಸಿಕೊಂಡ ವಿಲಿಯಂ ಷೇಕ್ಸ್‌ಪಿಯರ್ ಇಂಗ್ಲೆಂಡ್‌ನ ವಾರ್‌ವಿಕ್‌ಷೈರ್‌ನಲ್ಲಿರುವ ಸ್ಟ್ರಾಟ್‌ಫರ್ಡ್-ಅಪ್-ಏವನ್‌ನಲ್ಲಿ (ಸುಮಾರು 1564ರ ಏಪ್ರಿಲ್ 23ರಂದು) ಹುಟ್ಟಿದ. ಜಾನ್ ಮತ್ತು ಮೇರಿ ಷೇಕ್ಸ್‌ಪಿಯರ್ ದಂಪತಿಗಳ ಎಂಟು ಮಕ್ಕಳಲ್ಲಿ ಇವನು ಮೂರನೆಯವನು.

ಷೇಕ್ಸ್‌ಪಿಯರ್ ಕವಿ, ರಂಗಭೂಮಿಗೆ ನಾಟಕಗಳನ್ನು ಬರೆದವನು ಮತ್ತು ನಾಟಕಕಾರ. ಅವನನ್ನು ಇಂಗ್ಲೆಂಡ್‌ನ ರಾಷ್ಟ್ರಕವಿ ಎಂದೂ 'ಏವನ್‌ನ ಕವಿ' ಎಂದೂ ಕರೆಯುತ್ತಾರೆ. ಅವನು 38 ನಾಟಕಗಳನ್ನು, 154 ಸುನೀತಗಳನ್ನು, ಎರಡು ದೀರ್ಘ ವೃತ್ತಾಂತ ಕವನಗಳನ್ನು ಬರೆದನೆಂದು ಹೇಳುತ್ತಾರೆ. ಷೇಕ್ಸ್‌ಪಿಯರ್ ನಾಟಕಗಳನ್ನು ಜಗತ್ತಿನಲ್ಲಿ ಬಳಕೆಯಲ್ಲಿರುವ ಪ್ರತಿಯೊಂದು ಭಾಷೆಗೂ ಅನುವಾದ ಮಾಡಿದ್ದಾರೆ. ಜಗತ್ತಿನ ಬೇರಾವುದೇ ನಾಟಕಕಾರನ ನಾಟಕಗಳಿಗಿಂತ ಇವನ ನಾಟಕಗಳು ಹೆಚ್ಚು ಅಭಿನಯವಾಗುತ್ತಿವೆ.



ಮಾರ್ಕ್ ಆ್ಯಂಟನಿ : ಇವನು ರೋಮನ್ ಚಕ್ರಾಧಿಪತ್ಯವನ್ನು ಆಳಿದ ತ್ರಿಮೂರ್ತಿಗಳಲ್ಲಿ ಒಬ್ಬ. ಇವನು ಸೈನ್ಯಾಧಿಪತಿ, ಇವನು ಕ್ಲಿಯೋಪಾಟ್ರಳನ್ನು ಪ್ರೇಮಿಸುತ್ತಾನೆ. ರೋಮ್‌ಗೆ ತನ್ನ ಕರ್ತವ್ಯ ಮತ್ತು ಕ್ಲಿಯೋಪಾಟ್ರಳ ಪ್ರೇಮ - ಇವುಗಳ ನಡುವೆ ಮಾನಸಿಕವಾಗಿ ಯಾತನೆ ಪಡುತ್ತಾನೆ.



ಕ್ಲಿಯೋಪಾಟ್ರ : ಇವಳು ಈಜಿಪ್ಟಿನ ರಾಣಿ. ಮಾರ್ಕ್ ಆ್ಯಂಟನಿಯನ್ನು ಪ್ರೀತಿಸುತ್ತಾಳೆ. ಇವಳು ಬಹಳ ಶಕ್ತಿವಂತಳು, ಆಕರ್ಷಕವಾಗಿದ್ದಾಳೆ ಮತ್ತು ನಾಟಕೀಯ ನಡತೆಯವಳು. ಆ್ಯಂಟನಿಯ ಮೇಲೆ ತನ್ನ ಹಿಡಿತವನ್ನು, ಅವನನ್ನು ಹೇಗೆಂದರೆ ಹಾಗೆ ಕುಣಿಸಲು ಬಳಸುತ್ತಾಳೆ.

ಆಕ್ಟೇವಿಯಸ್ ಸೀಸರ್ : ಇವನು ತ್ರಿಮೂರ್ತಿಗಳಲ್ಲಿ ಎರಡನೆಯವನು. ಇವನು ಜೂಲಿಯಸ್ ಸೀಸರ್‌ನ ಸೋದರಳಿಯ ಮತ್ತು ದತ್ತು ಪುತ್ರ. ಇವನಿಗೆ ಮಹತ್ವಾಕಾಂಕ್ಷೆಯಿದೆ, ಆದರೆ ಸಮರ ಚಾತುರ್ಯವಿಲ್ಲ.




ಸೆಕ್ಸ್‌ಟಸ್ ಪಾಂಪೆಯಸ್ (ಪಾಂಪೆ) : ಇವನು ತ್ರಿಮೂರ್ತಿಗಳಿಗೆ ಅಪಾಯದ ಶತ್ರು. ಇವನು ಇನ್ನೂ ತರುಣ, ಜನಪ್ರಿಯ ಮತ್ತು ಸಮರ ಚಾತುರ್ಯದಲ್ಲಿ ಗಟ್ಟಿಗ.



ರಾಜಕೀಯ ಸನ್ನಿವೇಶಗಳು ತನಗೆ ಅನುಕೂಲವಾಗಿ ರೂಪುಗೊಂಡಾಗ ಅವುಗಳನ್ನು ತನ್ನ ಪರವಾಗಿ ಬಳಸಿಕೊಳ್ಳಲಾರ.

## ಆ್ಯಂಟನಿ ಮತ್ತು ಕ್ಲಿಯೋಪಾಟ್ರ

ಜೂಲಿಯಸ್ ಸೀಸರ್‌ನ ಸಾವಿನ ನಂತರ ರೋಮ್ ಗೊಂದಲಮಯವಾಗಿತ್ತು. ಪಾಂಪೆ ಸೀಸರನನ್ನು ಕೊಲೆ ಮಾಡಿದ್ದ; ಅವನು ಮತ್ತು ಬ್ರೂಟಸ್ ಪಲಾಯನ ಮಾಡುತ್ತಿದ್ದರು.





ಆಕ್ಟೇವಿಯಸ್ ಸೀಸರ್ (ಜೂಲಿಯಸ್ ಸೀಸರ್‌ನ ಸೋದರಳಿಯ), ಮಾರ್ಕ್ ಆ್ಯಂಟನಿ ಮತ್ತು ಲೆಪಿಡಸ್ ಒಟ್ಟಾಗಿ ಬ್ರೂಟಸ್ ಮತ್ತು ಪಾಂಪೆಯನ್ನು ಬೇಟೆಯಾಡುತ್ತಿದ್ದರು.

ಒಟ್ಟಾಗಿ ಅವರು ದುಷ್ಟರನ್ನೆಲ್ಲ ಓಡಿದರು. ಸೀಸರ್‌ನನ್ನು ಕೊಂದ ಪಿತೂರಿಗಾರರೆಲ್ಲರ ವಧೆಯಾಯಿತು ಅಥವಾ ಅವರು ತಮ್ಮನ್ನು ತಾವೇ ಕೊಂದುಕೊಂಡರು; ಅವರಿಗೆ ತ್ರಿಮೂರ್ತಿಗಳ ಕೈಗೆ ಸಿಕ್ಕಿಬೀಳುವುದು ಇಷ್ಟವಿರಲಿಲ್ಲ.

ಎಲ್ಲ ದುಷ್ಟರನ್ನು ಓಡಿಸಿ ರೋಮ್ ನಗರವನ್ನು ಶುದ್ಧಿಗೊಳಿಸಿದ ಮೇಲೆ ತ್ರಿಮೂರ್ತಿಗಳು ರೋಮ್ ಚಕ್ರಾಧಿಪತ್ಯವನ್ನು ಹಂಚಿಕೊಳ್ಳಲು ತೀರ್ಮಾನಿಸಿದರು. ಆ ಚಕ್ರಾಧಿಪತ್ಯವು ಜಗತ್ತಿನ ಬಹುಭಾಗಗಳಲ್ಲಿ ಹರಡಿಕೊಂಡಿತ್ತು.





ಮೂವರು ನಾಯಕರಲ್ಲಿ,
ಪ್ರಭುತ್ವವನ್ನು ನಡೆಸಲು
ಪ್ರತಿಯೊಬ್ಬರಿಗೂ ಚಕ್ರಾಧಿಪತ್ಯದ
ಒಂದು ಭಾಗ ಸಿಕ್ಕಿತು.
ಸೀಸ್ಸರನನ್ನು ಕೊಂದವರಿಗೆ
ಬುದ್ಧಿಕಲಿಸುವುದರಲ್ಲಿ
ಮುಖ್ಯಪಾತ್ರ ವಹಿಸಿದ ಆ್ಯಂಟನಿಗೆ
ಈಜಿಪ್ಟ್‌ನಲ್ಲಿನ ಪ್ರದೇಶಗಳನ್ನು
ಕೊಡಲಾಯಿತು. ಈ ಪ್ರದೇಶಕ್ಕೆ
ತನ್ನದೇ ಆದ ರಾಣಿ,
ಕ್ಲಿಯೋಪಾಟ್ರ ಇದ್ದಳು.

ಕ್ಲಿಯೋಪಾಟ್ರ
ಬುದ್ಧಿವಂತಳು. ತನ್ನ ಪ್ರಜೆಗಳ
ಮೇಲೆ ತನ್ನ ಅಧಿಕಾರ
ನಡೆಯಬೇಕಾಗಿದ್ದರೆ ರೋಮ್‌ನ
ಪ್ರಭುಗಳಿಗೆ ನಿಷ್ಠೆಯನ್ನು devotion
ತೋರುವುದೊಂದೇ ಮಾರ್ಗ loyalty
ಎಂದು ಅವಳಿಗೆ ಗೊತ್ತಿತ್ತು.





ಅವಳು ಇಡೀ ಈಜಿಪ್ಟಿನಲ್ಲಿ ಅತ್ಯಂತ ಸುಂದರಿಯಾಗಿದ್ದಳು.
ಈಜಿಪ್ಟನ್ನು ನೋಡಿಕೊಳ್ಳಲು ರೋಮ್‌ನಿಂದ ಬರುತ್ತಿದ್ದ
ಪ್ರಭುಗಳಿಗೆ

ಪ್ರೀತಿಯನ್ನು ತೋರಿಸುವುದು ತನಗೆ ಲಾಭಕರ ಎಂದು ಅತ್ಯಂತ
ಬುದ್ಧಿವಂತಳಾದ ಅವಳಿಗೆ ತಿಳಿದಿತ್ತು.

ಈ ಕ್ರೂರ ರಾಣಿ ಪ್ರಾರಂಭದಲ್ಲಿ ಮಹಾನ್ ಚಕ್ರವರ್ತಿ
ಜೂಲಿಯಸ್ ಸೀಸರನನ್ನೇ ಪ್ರೀತಿಸುವಂತೆ ನಟಿಸುತ್ತಿದ್ದಳು.



ಅವನು ಸಾಯುವ ಮೊದಲು ಕೆಲವು ದಿನಗಳ ಮಟ್ಟಿಗೆ ಈಜಿಪ್ಟಿಗೆ ಬಂದಿದ್ದ. ಅವನಿಗೆ ಭಾರೀ ಅಪತ್ತು ಒದಗುವುದೆಂದು ತನಗೆ ಭಯ, ಆದ್ದರಿಂದ ಅವನು ರೋಮ್ ನಗರಕ್ಕೆ ಹೋಗಬಾರದು ಎಂದು ಎಚ್ಚರಿಕೊಟ್ಟಿದ್ದಳು. ಸ್ವಲ್ಪವೂ ಎಚ್ಚರಿಕೆಯನ್ನು ವಹಿಸದೆ ಜೂಲಿಯಸ್ ಸೀಸರ್ ರೋಮ್‌ಗೆ ಹೋದ, ಅಲ್ಲಿ ಕೊಲೆ ಮಾಡಲ್ಪಟ್ಟ.

ರೋಮನ್ ಚಕ್ರಾಧಿಪತ್ಯದ ಪರವಾಗಿ ಜೂಲಿಯಸ್ ಸೀಸರ್‌ನ ನಂತರ ಅಧಿಕಾರ ವಹಿಸಿಕೊಳ್ಳುವ ರೋಮನ್ ಸೈನ್ಯಾಧಿಕಾರಿ ಮಾರ್ಕ್ ಆ್ಯಂಟನಿ ಎಂದು ಕ್ಲಿಯೋಪಾಟ್ರಳಿಗೆ ಗೊತ್ತಾಯಿತು.









ತನ್ನ ಸೌಂದರ್ಯದಿಂದ ಅವನನ್ನು ಒಲಿಸಿಕೊಂಡು ತನ್ನ ವಶ ಮಾಡಿಕೊಳ್ಳಬೇಕೆಂದು ಅವಳು ಕೂಡಲೇ ತೀರ್ಮಾನಿಸಿದಳು.

ಮಾರ್ಕ್ ಆ್ಯಂಟನಿ ಅಲೆಕ್ಸಾಂಡ್ರಿಯಾಕ್ಕೆ ಬಂದ ಕೆಲವೇ ದಿನಗಳಲ್ಲಿ ಕ್ಲಿಯೋಪಾಟ್ರಳನ್ನು ಮೈಮರೆಯುವಂತೆ ಪ್ರೇಮಿಸಿದ.











ಅವಳ ಸೌಂದರ್ಯಕ್ಕೆ ಎಷ್ಟರ ಮಟ್ಟಿಗೆ ವಶನಾದನೆಂದರೆ ರೋಮನರ ಶಿಬಿರದಲ್ಲಿ ಬಹುಮಂದಿ ಅವಳು ಏನೋ ಮಾಟಮಂತ್ರ ಮಾಡಿರಬೇಕೆಂದು ಭಾವಿಸಿದರು.








ಅವನು ರಾಜ್ಯದ ವಿಷಯಗಳನ್ನೆಲ್ಲ ಮರೆತು ಹೆಚ್ಚು ಹೆಚ್ಚಾಗಿ ತನ್ನ ಸಮಯವನ್ನು ಕ್ಲಿಯೋಪಾಟ್ರಳ ಕೋಣೆಯಲ್ಲಿ ಕಳೆಯಲು ಪ್ರಾರಂಭಿಸಿದ.


ಆದರೆ ಒಂದು ದಿನ ರೋಮ್‌ನಲ್ಲಿ ಅಸಮಾಧಾನವು ಹೆಚ್ಚುತ್ತಿದೆ ಎಂದು ಸುದ್ದಿ ಬಂದಿತು. ಮಹಾಯುದ್ಧವೀರ ಪಾಂಪೆಯ ಮಗ ಸೆಕ್ಸ್‌ಟಸ್ ಪಾಂಪೆ ಬಹುಕಾಲದಿಂದ ರಾಜ್ಯದ ಮೇಲೆ ಆಕ್ರಮಣ ಮಾಡಲು ಅವಕಾಶಕ್ಕಾಗಿ ಕಾಯುತ್ತಿದ್ದ. ತನ್ನ ತಂದೆಯ ಸಾವಿಗೆ ಪ್ರತೀಕಾರ ಮಾಡಲು



ಬಯಸುತ್ತಿದ್ದ. ಜೂಲಿಯಸ್ ಸೀಸರ್‌ನನ್ನು ಕೊಲ್ಲಲು ತನ್ನ ತಂದೆ ಮತ್ತು ಅವನ ಸ್ನೇಹಿತರು ಮಾಡಿದ ಪಿತೂರಿ ನ್ಯಾಯವಾಗಿ ಇತ್ತೆಂದು ಅವನ ಭಾವನೆ. ಆದುದರಿಂದ ಅದೇ ಆಡಳಿತ ವ್ಯವಸ್ಥೆಯು ತನ್ನ ತಂದೆಯನ್ನು ಕೊಂದಿತೆಂದು ದುಃಖ ಪಡುತ್ತಿದ್ದ. ಗಾಯಕ್ಕೆ ಸುಣ್ಣ ಬಳಿದಂತೆ

22

23




ಸೀಸರ್‌ನ ಸೋದರಳಿಯ ಆಕ್ಟೇವಿಯಸ್ ಸೀಸರ್‌ನ ಸ್ಥಾನವನ್ನು ಆಕ್ರಮಿಸಿಕೊಂಡ. ರೋಮನ್ ಚಕ್ರಾಧಿಪತ್ಯದ ಮುಂದಿನ ಪ್ರಭುವಾಗಿ ಬಿಟ್ಟಿದ್ದ.

ಆಕ್ರಮಣ ಮಾಡಲು ಸೆಕ್ಸ್‌ಟಸ್ ಪಾಂಪೆಗೆ ಇದೇ ಅವಕಾಶವಾಯಿತು. ರೋಮನ್ ಸೈನ್ಯದ ಬೆನ್ನುಮೂಳೆಯಾಗಿದ್ದ ಮಾರ್ಕ್ ಆ್ಯಂಟನಿ ಈಜಿಪ್ಟಿಗೆ ಹೋಗಿದ್ದ,

24

25

ಮಾಂತ್ರಿಕ ಶಕ್ತಿಯಿದ್ದ ಕ್ಲಿಯೋಪಾಟ್ರಳ ಕಿರುಬೆರಳಿಗೆ ಅಂಟಿಕೊಂಡಿದ್ದ. ಲೆಪಿಡಸ್ ರೋಮನ್ ಚಕ್ರಾಧಿಪತ್ಯದ ತನ್ನ ಭಾಗವನ್ನು ಆಳಿಕೊಂಡು ಎಲ್ಲೋ ದೂರ ಇದ್ದ. ರೋಮ್‌ನಲ್ಲಿ ಆಕ್ಟೇವಿಯಸ್ ಒಬ್ಬನೇ ಉಳಿದಿದ್ದ. ಅವನು ತನ್ನ ಸೋದರ ಮಾವನಷ್ಟು ಮಹಾನ್ ಯೋಧನಲ್ಲ ಎಂದು ಎಲ್ಲರಿಗೂ ತಿಳಿದಿತ್ತು.






ಈ ಬಂಡಾಯದ ಸುದ್ದಿ ಆಕ್ಟೇವಿಯಸ್ ಸೀಸರ್‌ನಿಗೆ ತಲುಪುತ್ತಲೇ ಅವನು ಸನ್ನಿವೇಶವು ಬಹಳ ಗಂಭೀರವಾಗಿದೆ ಎಂದು ಅರ್ಥಮಾಡಿಕೊಂಡ. ರೋಮ್‌ಗೆ ಹಿಂತಿರುಗಿ ಪ್ರಾರಂಭವಾಗಲಿದ್ದ ಬಂಡಾಯವನ್ನು ತಡೆಯಲು


uprising





ತನಗೆ ನೆರವಾಗಬೇಕೆಂದು ಆ್ಯಂಟನಿಗೆ ಸಂದೇಶ ಕಳುಹಿಸಿದ. ಆ್ಯಂಟನಿಯು ಹಿಂತಿರುಗಿ ಹೋಗುವುದು ಕ್ಲಿಯೋಪಾಟ್ರಳಿಗೆ ಇಷ್ಟವಿರಲಿಲ್ಲ. ಆದರೆ ತಾನು ಆಕ್ಟೇವಿಯಸ್‌ನ ನೆರವಿಗೆ ಹೋಗಬೇಕು, ಇಲ್ಲವಾದರೆ ಒಬ್ಬ ಹೆಂಗಸಿಗಾಗಿ ತಾನು ಹಿಂದೆ ಉಳಿದೆ ಎಂದು ಜನರು ಮಾತನಾಡುವರೆಂದು, ರೋಮನ್ ಸೈನ್ಯಾಧಿಪತಿ ಆ್ಯಂಟನಿಗೆ ಗೊತ್ತಿತ್ತು.





ಹೀಗಾಗಬಾರದು ಎಂದು ಅವನು ಕೂಡಲೇ ರೋಮ್‌ಗೆ ಹೊರಟ.

ರೋಮ್‌ಅನ್ನು ತಲುಪಿದ ಮಾರ್ಕ್ ಆ್ಯಂಟನಿಗೆ ತನ್ನ ಹೆಂಡತಿಯು ಸ್ವಲ್ಪ ಮೊದಲು ತೀರಿಕೊಂಡಿದ್ದಳೆಂದು ತಿಳಿಯಿತು. ಅವನು ಈಜಿಪ್ಟ್‌ನಲ್ಲಿದ್ದಾಗಲೇ ಅವನಿಗೆ ಈ ಸುದ್ದಿ ತಿಳಿಸಲು ಅನೇಕ ದೂತರನ್ನು ಕಳುಹಿಸಲಾಗಿತ್ತು. ಆದರೆ ಅವನು ಕ್ಲಿಯೋಪಾಟ್ರಳ ಸಹವಾಸದಲ್ಲಿ ಎಷ್ಟು ಮೈಮರೆತಿದ್ದ ಎಂದರೆ ಆ ದೂತರನ್ನು ಮಾತನಾಡಿಸಲು ಒಪ್ಪಲೇ ಇಲ್ಲ.







ಅವಳು ಬಂದದ್ದಕ್ಕೆ ಕಾರಣ ನಿಜ ಅವನಿಗೆ ಗೊತ್ತಿರಲಿಲ್ಲ. ಅವಳು ಬದುಕಿದ್ದಾಗ ಯಾವಾಗಲೂ ಅವನನ್ನು ಪ್ರೀತಿಸಿದ್ದ ಹೆಂಡತಿಯನ್ನು ಇಷ್ಟು ತಿರಸ್ಕಾರದಿಂದ ಕಂಡದ್ದಕ್ಕೆ ಅವನಿಗೆ ಪಶ್ಚಾತ್ತಾಪವಾಯಿತು. ಹೆಂಡತಿಯ ಸಾವಿನ ಸುದ್ದಿಯಿಂದ ಅವನಿಗೆ ಎಷ್ಟು ಆಘಾತವಾಯಿತೆಂದರೆ ಕ್ಲಿಯೋಪಾಟ್ರಳನ್ನು ಮರೆತೇ ಬಿಟ್ಟ.

ಆದರೆ ತಾನು ಮಾಡಿದ ತಪ್ಪುಗಳಿಗೆ ದುಃಖಿಪಡುತ್ತಾ ಕುಳಿತುಕೊಳ್ಳುವ ಸಮಯ ಆದಾಗಿರಲಿಲ್ಲ; ಯುದ್ಧ ಮಾಡಬೇಕಾಗಿತ್ತು. ಆ್ಯಂಟನಿಯು ಕೂಡಲೇ ತನ್ನ ಕವಚವನ್ನು ಧರಿಸಿ ಶೀಘ್ರವಾಗಿ ಆಕ್ಟೇವಿಯಸ್ ಸೀಸರ್‌ನನ್ನು ತಲುಪಿದ. ಆ್ಯಂಟನಿಯನ್ನು ಕಂಡು ಆಕ್ಟೇವಿಯಸ್‌ಗೆ ಬಹಳ ಸಂತೋಷವಾಯಿತು.





ಏಕೆಂದರೆ ಅವರಿಬ್ಬರ ತನ್ನ ಸೈನ್ಯದ ಸೆಕ್ಸ್ಟಸ್ ಪಾಂಪೆಯನ್ನು ಕೊಲ್ಲುವಷ್ಟು ಶಕ್ತಿವಾಗಿರಲಿಲ್ಲ ಎಂದು ತಿಳಿದಿತ್ತು.

ಆದರೆ ವಾಸ್ತವವಾಗಿ ಭಯಂಕರ ಯುದ್ಧವೇನೂ ನಡೆಯಲಿಲ್ಲ. ಪಾಂಪೆ ಮತ್ತು ಆಕ್ಟೇವಿಯಸ್ ಅವರ ನಡುವೆ ಶಾಂತಿಯನ್ನು ಮೂಡಿಸಲು ಆ್ಯಂಟನಿಗೆ ಸಾಧ್ಯವಾಯಿತು.





ಪಾಂಪೆಯ ಸ್ನೇಹದಿಂದ ಇರುತ್ತೇವೆ ಎಂದು ಒಪ್ಪಿ ಇಬ್ಬರೂ ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಂಡರು.


ಆದರೆ ಆ್ಯಂಟನಿ ಮತ್ತು ಆಕ್ಟೇವಿಯಸ್‌ರ ನಡುವೆ ಜಗಳ ಇದ್ದೇ ಇತ್ತು.







ತನಗಿಂತ ಆ್ಯಂಟನಿ ಜನಪ್ರಿಯನಾಗಿದ್ದ, ಆದ್ದರಿಂದ ಅವನು ತನ್ನ ಹಕ್ಕು ಸಾಧನೆಗೆ ಅಡ್ಡಿಯಾಗುತ್ತಾನೆ ಎಂದು ಆಕ್ಟೇವಿಯಸ್‌ಗೆ ಆ್ಯಂಟನಿಯ ವಿಷಯದಲ್ಲಿ ತೀರ ಅಸಹ್ಯ. ಆಕ್ಟೇವಿಯಸ್‌ನು ತಮ್ಮ ಮಹಾನ್ ಬಂಧು ಜೂಲಿಯಸ್ ಸೀಸರ್‌ನ ನಂಟ ಎಂಬ ಒಂದೇ ಕಾರಣಕ್ಕೆ ಸಿಂಹಾಸನಕ್ಕೆ ಹಕ್ಕುದಾರನಾದ, ಇಲ್ಲವಾದರೆ ಸಿಂಹಾಸನವು ತನಗೇ ಬರುತ್ತಿತ್ತು ಎಂದು ಆ್ಯಂಟನಿಯ ಭಾವನೆ. ರೋಮನ್ ಸಾಮ್ರಾಜ್ಯಕ್ಕೆ ಹಕ್ಕುದಾರರಾಗಿದ್ದ ಇಬ್ಬರು ಮುಖಂಡರ ನಡುವೆ ಶಾಂತಿ ಸ್ಥಾಪಿಸಲು ಏನಾದರೂ ಹೆಜ್ಜೆ ಇಡಬೇಕಾಗಿತ್ತು.




ಆ್ಯಂಟನಿಯ ಹೆಂಡತಿ ತೀರಿಕೊಂಡಿದ್ದಳು. ಆದ್ದರಿಂದ ಆ್ಯಂಟನಿ ಮತ್ತು ಆಕ್ಟೇವಿಯಸ್‌ನ ಸೋದರಿ ಆಕ್ಟೇವಿಯ ಇವರ ಮದುವೆಯನ್ನು ನಿಶ್ಚಯಿಸಲಾಯಿತು.

ಈ ಮದುವೆಯ ಸಂಬಂಧಕ್ಕೆ ಇನ್ನೊಂದು ಕಾರಣವಿತ್ತು -

38

39



ಆ್ಯಂಟನಿಗೆ ಬಹಳ ಶಕ್ತಿವಂತಳಾದ ಹೆಂಡತಿಯು ದೊರೆತದ್ದರಿಂದ ಇನ್ನು ಅವನು ಕ್ಲಿಯೋಪಾಟ್ರಳ ಆಕರ್ಷಣೆಯಿಂದ ಬಿಡಿಸಿಕೊಂಡು ಈಜಿಪ್ಟಿನ ಆಗುಹೋಗುಗಳಿಗೆ ಇನ್ನಷ್ಟು ಗಮನಕೊಡುತ್ತಾನೆ ಎಂದು ಎಲ್ಲರೂ ಭಾವಿಸಿದರು. ಆದರೆ ಆ್ಯಂಟನಿ ಆಕ್ಟೇವಿಯಳನ್ನು ಮದುವೆ ಮಾಡಿಕೊಂಡ ಎಂದು ಕೇಳಿ ಕ್ಲಿಯೋಪಾಟ್ರ

40

ಉರಿದುಬಿದ್ದಳು. ಅವಳಿಗೆ ಆ್ಯಂಟನಿಯು ಸಂಪೂರ್ಣವಾಗಿ ತನ್ನೊಬ್ಬಳಿಗೇ ಸೇರಬೇಕೆಂದು ಬಯಕೆ.

41



ಆವೇಶದಿಂದ ಅವಳು ತನ್ನ ಸುತ್ತ ಇದ್ದ ಎಲ್ಲ ಸಾಮಾನುಗಳನ್ನು ಒಡೆದಳು ಮತ್ತು ನಾಶ ಮಾಡಿದಳು. ಸ್ವಲ್ಪ ಹೊತ್ತಿನ ನಂತರ ಅವಳು ಸಮಾಧಾನ ತಂದುಕೊಂಡಳು. ಆ್ಯಂಟನಿಗೆ ನಿಜವಾಗಿ ಆಕ್ಟೇವಿಯಳಲ್ಲಿ ಪ್ರೀತಿಯಿರಲಿಲ್ಲ. ಈ ನಡುವೆ ಏನಿದ್ದರೂ ಆ್ಯಂಟನಿ ಮತ್ತು ಆಕ್ಟೇವಿಯಸ್‌ರ ನಡುವೆ ಸಮಾಧಾನ ತರಲು ಒಂದು ರಾಜಕೀಯ ಉಪಾಯ ಎಂದು ಅವಳು ತರ್ಕಿಸಿದಳು.



ಕ್ಲಿಯೋಪಾಟ್ರಳನ್ನು ಮರೆತಿದ್ದ ಆ್ಯಂಟನಿ ಅಥೆನ್ಸ್‌ನನ್ನು ಆಳಲು ಹೊರಟು ಹೋದನು. ಆಕ್ಟೇವಿಯ ಅವನೊಡನೆ ಹೋದಳು. ಆದರೆ ಈ ಸ್ಥಿತಿ ಬಹುಕಾಲ ಇರಲಿಲ್ಲ. ಆ್ಯಂಟನಿಯ ಬಹು ಬುದ್ಧಿವಂತ ನೆರವಿಲ್ಲದೆ ಪಾಂಪೆ ಮತ್ತು ಸೀಸ್ಟರ್ ಸ್ವಲ್ಪ ಕಾಲದಲ್ಲಿಯೇ ಬದ್ಧಶತ್ರುಗಳಾದರು.





ಯುದ್ಧವು ನಡೆದೇ ನಡೆಯುತ್ತದೆ ಎಂದು ತೋರಿತು. ಅಥೆನ್ಸ್‌ನಲ್ಲಿದ್ದ ಆ್ಯಂಟನಿಗೆ ಎರಡು ಪಕ್ಷಗಳವರೂ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ ತಲುಪಿತು. ಎಂದರೆ ಆ್ಯಂಟನಿಯು ರೋಮ್ ನಗರಕ್ಕೆ ಹಿಂದಿರುಗಿ ಆಕ್ಟೇವಿಯಸ್ ಸೀಸರ್‌ನ ಸೈನ್ಯವನ್ನು ಸೇರಿಕೊಳ್ಳಬೇಕು ಎಂದಾಯಿತು. ಆಕ್ಟೇವಿಯ ಚಿಂತೆಯಲ್ಲಿದ್ದ ತನ್ನ ಸೋದರನಿಗೆ ನೆರವಾಗಲು ಆ್ಯಂಟನಿ ಅವಳನ್ನು ರೋಮ್‌ಗೆ ಕಳುಹಿಸಿದ. ಆನಂತರ ಈ ಮಹಾನ್ ಸೇನಾನಿಯು







ತನ್ನ ಹೃದಯೇಶ್ವರಿ ಕ್ಲಿಯೋಪಾಟ್ರಳನ್ನು ಸೇರಿಕೊಳ್ಳಲು ಈಜಿಪ್ಟಿಗೆ ಧಾವಿಸಿದ.

ಆ್ಯಂಟನಿಯು ಈಜಿಪ್ಟಿಗೆ ಹೊರಟನೆಂಬ ಸುದ್ದಿ ಆಕ್ಟೇವಿಯಸ್ ಸೀಸರ್‌ನಿಗೆ ತಲುಪಿದಾಗ ಸಹಜವಾಗಿ ಅವನಿಗೆ ತಡೆಯಲಾಗದಷ್ಟು ರೋಷವುಂಟಾಯಿತು.





ಯುದ್ಧದ ಭಯದಲ್ಲಿ ತಾನಿದ್ದಾಗ ತನ್ನ ಸೋದರ ಮಾವನ ಪರಮಾಪ್ತನು ತನ್ನ ಅಧೀನದಲ್ಲಿದ್ದ ರಾಣಿಯ ಒಲವನ್ನು ಸಂಪಾದಿಸಲು ತನ್ನನ್ನು ತನ್ನ ಪಾಡಿಗೆ ಬಿಟ್ಟು ಹೊರಟುಹೋಗುವನೆಂದು ನಂಬಲು ಅವನಿಗೆ ಸಾಧ್ಯವಾಗಲಿಲ್ಲ. ಸೆಕ್ಸ್‌ಟಸ್ ಪಾಂಪೆಯೊಡನೆ ಯುದ್ಧವನ್ನು ಮುಂದಕ್ಕೆ ಹಾಕಿದ ಮತ್ತು ಕೂಡಲೆ




ಆ್ಯಂಟನಿ, ಕ್ಲಿಯೋಪಾಟ್ರ ಅವರ ಮೇಲೆ ಯುದ್ಧವನ್ನು ಸಾರಿದ. ಕೆಲವೇ ದಿನಗಳಲ್ಲಿ ಆ್ಯಂಟನಿಯು ಬಹುಶಕ್ತಿವಂತ ರೋಮ್‌ನ ಸೈನ್ಯವನ್ನು ಈಜಿಪ್ಟಿನಲ್ಲಿ ಕಂಡ.

ಯೋಧನಾದ ಆಕ್ಟೇವಿಯಸ್ ಸೀಸರ್ ಈ ಯುದ್ಧವನ್ನು ಹೇಗೆ ನಡೆಸಬೇಕು ಎನ್ನುವುದನ್ನು ತೀರ್ಮಾನಿಸುವ ಅವಕಾಶವನ್ನು ಆ್ಯಂಟನಿಗೆ ಬಿಟ್ಟುಕೊಟ್ಟ. ತನ್ನ ಇಡೀ ಜೀವನದಲ್ಲಿ ಅತ್ಯಂತ ದೊಡ್ಡ ತಪ್ಪನ್ನು ಈ ಸಮಯದಲ್ಲಿ ಆ್ಯಂಟನಿ ಮಾಡಿದ. ಈಜಿಪ್ಟಿನ ನೌಕಾದಳವು










ಬಲಿಷ್ಠ ರೋಮ್ ನೌಕಾದಳಕ್ಕೆ ಸರಿಸಮನಾಗಲು ಸಾಧ್ಯವೇ ಇಲ್ಲ ಎನ್ನುವುದನ್ನು ತಿಳಿಯದೆ ಅವನು ರೋಮನರನ್ನು ಸಮುದ್ರದ ಮೇಲೆ ಎದುರಿಸಲು ತೀರ್ಮಾನಿಸಿದ. ಅಲ್ಲದೆ ರೋಮ್‌ನ ನೌಕಾದಳವು ರೋಮ್‌ನಿಂದ ಅಷ್ಟುದೂರ ಬಂದಿತ್ತು. ಆದ್ದರಿಂದ ಅದರ ಬಲವಷ್ಟೂ ಅದಕ್ಕಿದ್ದಿತು. ಭೂಮಿಯ ಮೇಲೆ ಅವರೊಡನೆ ಯುದ್ಧಮಾಡಲು ಆ್ಯಂಟನಿ ತೀರ್ಮಾನಿಸಿದ್ದರೆ ಪ್ರಾಯಶಃ ಆಕ್ಟೇವಿಯಸ್ ಸೀಸ್ಪರ್‌ನನ್ನು ಈಜಿಪ್ಟಿನ ಸೈನ್ಯವು ಸೋಲಿಸಲು ಹೆಚ್ಚು ಅವಕಾಶವಾಗುತ್ತಿತ್ತು.





ನಿರೀಕ್ಷಿಸಿದಂತೆಯೇ ಈಜಿಪ್ಟಿನವರು ರೋಮ್‌ನ ನೌಕಾದಳದ ಶಕ್ತಿಯನ್ನು ತಡೆದುಕೊಳ್ಳಲಾಗಲಿಲ್ಲ, ಸ್ವಲ್ಪ ಹೊತ್ತಿನಲ್ಲಿಯೇ ಅವರು ಉರುಳುತ್ತಿದ್ದರು.







ತನ್ನ ಸೈನಿಕರಲ್ಲಿ ಧೈರ್ಯತುಂಬಿ ಅವರ ಮಧ್ಯಕ್ಕೆ ದಾರಿಯನ್ನು ಬಿಡಿಸಿಕೊಂಡು ಹೋಗಲು ಆ್ಯಂಟನಿಯು ಆದಷ್ಟು ಸಾಹಸ ಮಾಡಿದನು. ಆದರೆ ಸೈನ್ಯವು ಬೇರೆ ಬೇರೆ ಭಾಗಗಳಲ್ಲಿ ಇದ್ದುದರಿಂದ ಮಹಾನ್ ಸೇನಾನಿ ಆ್ಯಂಟನಿಯು ಕೂಡ ಏನನ್ನೂ ಮಾಡಲಾಗಲಿಲ್ಲ. ತನ್ನ ಸೈನಿಕರನ್ನು ರೋಮ್ ನೌಕಾದಳದತ್ತ ಕರೆದೊಯ್ಯಲು ಆ್ಯಂಟನಿಗೆ ಆಗಲಿಲ್ಲ. ಅವನು ಅವರೊಡನೆ ಹಿಮ್ಮೆಟ್ಟಬೇಕಾಯಿತು. ಸೀಸ್ಪರನು ಯುದ್ಧವನ್ನು ಗೆದ್ದಿದ್ದ;

ಆದರೆ ಅವನು ಆ್ಯಂಟನಿಯು ಅಲೆಕ್ಸಾಂಡ್ರಿಯಾದ ಅರಮನೆಗೆ ಹಿಮ್ಮೆಟ್ಟುವವರೆಗೆ ಅಟ್ಟಿಸಿಕೊಂಡು ಬಂದ.


ಆ್ಯಂಟನಿಯು ಅರಮನೆಯನ್ನು ತಲುಪಿದಾಗ ಕ್ಲಿಯೋಪಾತ್ರ ಬರೆದಿದ್ದ ಒಂದು ಸಣ್ಣ ಪತ್ರವು ಸಿಕ್ಕಿತು. ಅವನು ಯುದ್ಧವನ್ನು ಗೆಲ್ಲುವಷ್ಟು ಬಲಶಾಲಿಯಲ್ಲ, ಆದ್ದರಿಂದ ಅವಳಿಗೆ ನಿರಾಸೆಯಾಯಿತು. ವಿಷವನ್ನು ಸೇವಿಸಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದೇನೆ ಎಂದು ಬರೆದಿದ್ದಳು. ಆದರೆ ಕ್ಲಿಯೋಪಾತ್ರ ನಿಜವಾಗಿ ಸತ್ತೇ ಇರಲಿಲ್ಲ.











ಆಕೆಯು ಬಚ್ಚಿಟ್ಟುಕೊಳ್ಳಲು ಅರಮನೆಗೆ ಹತ್ತಿರವಿದ್ದ ಒಂದು ಸಮಾಧಿಗೆ ಹೋಗಿದ್ದಳು. ಪ್ರಾಯಶಃ ಅವಳು, ತಾನು ಸತ್ತುಹೋದೆ ಎಂದು ಆ್ಯಂಟನಿ ಭಾವಿಸಿದರೆ



ಅವನು ಆಕ್ಟೇವಿಯಸ್ ಸೀಸರನೊಡನೆ ಯುದ್ಧವನ್ನು ನಿಲ್ಲಿಸುತ್ತಾನೆ, ಯುದ್ಧವು ನಿಂತು ಹೋಗುತ್ತದೆ ಎಂದು ಭಾವಿಸಿದಳು.

ಆದರೆ ಆ್ಯಂಟನಿಗೆ ಅವಳಲ್ಲಿ ನಿಜವಾದ ಪ್ರೇಮವಿತ್ತು,
ಪತ್ರವನ್ನು ಓದಿದಾಗ ಅವನ ಎದೆ ಒಡೆಯಿತು.
ಕ್ಲಿಯೋಪಾಟ್ರ ಸತ್ತಮೇಲೆ ತಾನು ಬದುಕಿರಲು ಕಾರಣವೇ
ಇರಲಿಲ್ಲ. ತನ್ನ ಕಠಾರಿಯನ್ನು ತೆಗೆದುಕೊಂಡು
ಆ್ಯಂಟನಿಯು ತಾನು ಸಾಯುವಂತೆ ಚುಚ್ಚಿಕೊಳ್ಳಲು
ಪ್ರಯತ್ನಿಸಿದ, ಆದರೆ ಅವನಿಗೆ ಗಾಯವಾಯಿತಷ್ಟೇ.

dagger







disciples

ಅವನ ಅನುಯಾಯಿಗಳು ಅವನನ್ನು ಕಂಡಾಗ ಕೂಡಲೇ
ಕ್ಲಿಯೋಪಾಟ್ರ ಬಚ್ಚಿಟ್ಟುಕೊಂಡಿದ್ದ ಸಮಾಧಿಗೆ ಕರೆದೊಯ್ದರು.
ಕಡೆಗೂ ಕ್ಲಿಯೋಪಾಟ್ರ ಅವನ ತೋಳಿನಲ್ಲಿದ್ದಾಗ





ಆ್ಯಂಟನಿ ತನ್ನ ಗಾಯಗಳಿಂದ ಕಡೆಯುಸಿರನ್ನೆಳೆದನು. ಕ್ಲಿಯೋಪಾಟ್ರಳಿಗೆ
ಅವನು ತನ್ನ ಕಾಗದವನ್ನು ಓದಿ ಪ್ರಾಣ ಕಳೆದುಕೊಂಡಿದ್ದ, ಆದ್ದರಿಂದ
ಅವನ ಸಾವಿಗೆ





ತಾನೇ ಕಾರಣ ಎಂದು ಅರ್ಥವಾಯಿತು. ಅವಳಿಗೆ
ಎಷ್ಟು ದುಃಖವಾಯಿತೆಂದರೆ ತನ್ನ ಪ್ರಾಣವನ್ನು
ತೆಗೆದುಕೊಳ್ಳಲು ಅವಳು ತೀರ್ಮಾನಿಸಿದಳು.
ಆ್ಯಂಟನಿಯು ಸತ್ತ ಮೇಲೆ





ಆಕ್ಟೇವಿಯಸ್‌ನು ತನ್ನನ್ನು ಕಂಡರೆ ತನ್ನನ್ನು ಕಾಪಾಡುವವರು ಯಾರೂ ಇಲ್ಲ ಎಂದು ಅವಳಿಗೆ ಅರ್ಥವಾಯಿತು. ಅವಳು ಇಡೀ ಈಜಿಪ್ಟಿನಲ್ಲಿ ಅತ್ಯಂತ ವಿಷಪೂರಿತವಾದ ಹಾವುಗಳನ್ನು ತರಲು ದೂತರನ್ನು ಕಳುಹಿಸಿದಳು. ಅವು ತನ್ನನ್ನು ಕಚ್ಚುವಂತೆ ಇಟ್ಟುಕೊಂಡಳು. ಸ್ವಲ್ಪ ಹೊತ್ತಿನಲ್ಲಿಯೇ ತನ್ನ ಪ್ರಿಯ ಆ್ಯಂಟನಿಯ ಪಕ್ಕದಲ್ಲಿ ಅವಳು ಸತ್ತು ಮಲಗಿದಳು.

ಸತ್ತು ಬಿದ್ದಿದ್ದ ಅವರಿಬ್ಬರನ್ನು ಆಕ್ಟೇವಿಯಸ್‌ನು ಸಮಾಧಿಯಲ್ಲಿ ಕಂಡನು. ಆದರೆ ಅವನು ಕ್ಲಿಯೋಪಾತ್ರ ಭಾವಿಸಿದಷ್ಟು ನಿಷ್ಕರುಣಿಯಾಗಿರಲಿಲ್ಲ.

bloodless



Courage

ಧೀರ ಆ್ಯಂಟನಿಯ ಕೆಚ್ಚು ಮತ್ತು ಕ್ಲಿಯೋಪಾತ್ರಳ ಸೌಂದರ್ಯವನ್ನು ಹೊಗಳಿದ. ಇಬ್ಬರು ಪ್ರೇಮಿಗಳನ್ನು ಒಟ್ಟಿಗೆ ಸಮಾಧಿ ಮಾಡುವಂತೆ ತನ್ನವರಿಗೆ ಹೇಳಿದ. ಉದಾತ್ತ ಚರಿತನಾದ ಆ್ಯಂಟನಿ ಮತ್ತು ಆವನ ಸುಂದರಿ ಕ್ಲಿಯೋಪಾತ್ರರ ಅಮರ ಕಥೆ ಇದು.

magnanimous

